ವೈದ್ಯಕೀಯ ಓದುವುದು ಸಾಧ್ಯವಿಲ್ಲದೆ, ತನ್ನೂರ ಪಕ್ಕದ ಇಂಜಿನಿಯರಿಂಗ್ ಕಾಲೇಜು ಸೇರಿದ್ದಳು. ಇಂಜಿನಿಯರಿಂಗ್‌ನಂಥ ಉನ್ನತ ಮುಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಹುಡುಗಿ ಎಲ್ಲಿ ಪ್ರೇಮ, ಪ್ರೀತಿ ಎಂದು ತಿರುಗಾಡಿ ಮರಸುತ್ತುವಳೋ ಎಂದು ಹೆದರಿ ಅವಳ ಅಪ್ಪ ಅವಳನ್ನು ನಿತ್ಯ ತನ್ನ ಅಂಬಾಸಿಡರ್ ಕಾರಿನಲ್ಲೇ ಕಾಲೇಜಿಗೆ ಸಾಗಿಸಿ, ಕರೆತರುತ್ತಿದ್ದ. ಅತಿ ಮುದ್ದಿನ ಕಾಳಜಿಯಿಂದ ಹುಡುಗಿಗೆ ಇಡೀ ಮನೆಯೇ ಒಂದು ಬಂಗಾರದ ಪಂಜರವಾಗಿ ಕಾಣುತ್ತಿತ್ತು. ಅವಳಿಗೆಂದೇ ಅವಳಪ್ಪ ಮನೆಯ ಮಹಡಿಯನ್ನು ಒದಗಿಸಿದ್ದ. ಆಕೆಯ ರಂಜನೆಗೆಂದೇ ಟೇಪ್‌ರೆಕಾರ್ಡರ್, ರೇಡಿಯೋ ಕೊಡಿಸಿದ್ದ. ಮನೆಯ ತಾರಸಿಯಲ್ಲಿ ಹುಡುಗಿ ಬಣ್ಣ ಬಣ್ಣದ ಗುಲಾಬಿ ಗಿಡ ಬೆಳೆಸಿದ್ದಳು. ಬಿಡುವಾಗಿದ್ದಾಗೆಲ್ಲಾ ಹಿಂದಿ ಸಿನಿಮಾಗಳ ಮೊಹಬ್ಬತ್ ಹಾಡುಗಳನ್ನು ಹಾಕಿಕೊಂಡು, ಗುಲಾಬಿ ಹೂಗಳ ಜೊತೆ ಪ್ರೀತಿಯ ಮಾತುಗಳನ್ನು ಆಡುತ್ತಿದ್ದಳು.

ಅಲ್ಲಿಯೇ ಸುತ್ತುತ್ತಿದ್ದ ಅವಳ ಜಗತ್ತು ಹುಡುಗನ ಪತ್ರದ ಮೂಲಕ ವಿಶಾಲವಾಯಿತು. ಇದ್ದಕ್ಕಿದ್ದಂತೆ ಗುಲಾಬಿ ಗಿಡಗಳೆಲ್ಲಾ ಮುಳ್ಳು ಉದುರಿಸಿ, ಮೈ ತುಂಬಿ ಅರಳಿದಂತೆ ಅರಳಿ ತೊನೆದಂತೆ ಕಂಡಿತು.

ಈ ವೇಳೆಗೆ ಹುಡುಗನೂ ಸಾಕಷ್ಟು ಗೆಲುವಾಗಿದ್ದ. ಅವನದ್ದೂ ಹುಡುಗಿಯ ರೀತಿಯದ್ದೇ ಬಹುತೇಕ ಕಥೆ, ವ್ಯಥೆ. ಒಬ್ಬನೇ ಮಗ ಇತ್ಯಾದಿ. ಯಾರಿಂದಲೂ ಪ್ರೀತಿಸಲ್ಪಟ್ಟು ಗೊತ್ತಿಲ್ಲ. ಯಾರನ್ನು ಪ್ರೀತಿಸುವ ಸಾಹಸಕ್ಕಿಳಿದವನಲ್ಲ. ಇಲ್ಲಿ ಹುಡುಗ ಆದ್ದರಿಂದ ಎರಡನ್ನೂ ಮಾಡಲಿಲ್ಲ. ಹುಡುಗಿಯನ್ನು ಯಾವತ್ತು ಕಣ್ಣಲ್ಲೂ ಕಾಣದೇ, ಮೊದಲೇ ಕುರುಡಾಗಿರುವ ಪ್ರೇಮಕ್ಕೆ ಹೇಗೆ ಕುರುಡನಂತೆ ಬೀಳಬಲ್ಲ? ಇಷ್ಟರೊಳಗೆ ವಾರಕ್ಕೆ ಮೂರು ಪತ್ರ ಬರೆಯುತ್ತಿದ್ದ. ಹುಡುಗಿ ದಿನಕ್ಕೆ ಮೂರು ಬರೆಯುತ್ತಿರಬೇಕಾದರೆ, ಪ್ರೀತಿಗೆ ಮಾತುಗಳೇ ಬಿದ್ದು ಹೋದಂತಾಗಿ ಇಡೀ ಪತ್ರ ತುಂಬಾ ಐ ಲವ್ ಯೂ ಎಂದು ಸಾವಿರ ಸಾವಿರ ಬಾರಿ ಬರೆಯುತ್ತಿರಬೇಕಾದರೆ, ಗೆಜ್ಜೆಯ ಧ್ವನಿ ಝಣಿಕೆಗೆ ಸಪ್ಪೆಯಾಗಿರಲು ಸಾಧ್ಯನೇ?

ಈಗ ಇಬ್ಬರಿಗೂ ಈ ಬಗೆಯ ಮುಸುಕಿನಲ್ಲಿ ಒದ್ದಾಡುವುದು ಬೇಡವಾಗತೊಡಗಿದೆ. ಪರಸ್ಪರರನ್ನು ನೋಡಬೇಕೆಂಬ ಇರಾದೆ ಆ ಮೂಲಕವೇ ತವಕವಾಗಿ ಮೈ ತಳೆಯುತ್ತಿದೆ. ಹುಡುಗಿ ನೀನು ಈ ಊರಲ್ಲೇ ಇರಬೇಕಿತ್ತೆಂದು ಅಲ್ಲಿಂದ ನರಳಿದರೆ, ಅದಕ್ಕೂ ಮೊದಲು ಹುಡುಗ ನೀನು ಈ ಊರಿನವಳೇ ಆಗಿರಬೇಕಿತ್ತೆಂದು ಬಯಸಿದ. ಅದಕ್ಕೆ ಹುಡುಗಿಯೇ ಸಮಾಧಾನ ಹೇಳಿದಳು. 'ಎಷ್ಟು ದೂರದಲ್ಲಿದ್ದರೇನು ಬಂತು ನಾನು, ಸದಾ ನಿನ್ನ ಹೃದಯದಲ್ಲಿ ಬೆಚ್ಚಗೆ ಮನೆ ಮಾಡಿ ಕುಳಿತಿದ್ದೇನೆ ಗೊತ್ತಾಯ್ತಾ' ಎಂದು.

ಅದಕ್ಕೇ ಇರಬೇಕು ಹುಡುಗ ಎಂದಿಗಿಂತ ಪರಿಶುದ್ಧನಾಗತೊಡಗಿದ. ಹಾದಿಬೀದಿಯ ಚೆಲುವೆಯರಲ್ಲಿ ಆಯ್ದ ಚೆಲುವೆಯರಿಗೆ, ಟೀವಿ ಮೇಲೆ ಕುಣಿದು ಕುಪ್ಪಳಿಸಿ ಹೋಗುವ ರೂಪಸಿಗಳಿಗೆ ತಾನು ಈಗಷ್ಟೇ ಒಲವಿನ ಸೇತು ಕಟ್ಟಿದ ಅಜ್ಞಾತ ರೂಪಸಿಯನ್ನು ಹೋಲಿಸಿದ. ನಗರದ ನಡುಬೀದಿಯಲ್ಲಿ ಕಚೇರಿಗಳ ಕುರ್ಚಿಯಲ್ಲಿ, ಕಾಲೇಜಿನತ್ತ ಹೆಜ್ಜೆ ಹಾಕುವ ನೂರಾರು ತರುಣಿಯರ ಮೊಲೆಗಳನ್ನು ಮರೆತು ಮುಖವನ್ನೂ ಮರೆತ. ಬಸ್ಸಿನ ಪಕ್ಕ ಕುಳಿತ ತರುಣಿಯ ಕಿವಿಯಲ್ಲಿ ತೊನೆಯುವ ರಿಂಗು, ಅದರ ಮೌಲ್ಯ, ಅವಳ ಉಡುಪು, ಕೇಶರಾಶಿಯ ವೈಭವ, ಮುಖದ ಮಾದಕತೆ, ಇತ್ಯಾದಿಗಳನ್ನು ಒಂದೊಂದಾಗಿ ಅಭ್ಯಸಿಸತೊಡಗಿದ. ಇದ್ದಕ್ಕಿದ್ದಂತೆ ಸಮಸ್ತ ಮಹಿಳಾಲೋಕ ಪರಮಪೂಜ್ಯ ನಾರೀಸಹೋದರಿಗಳಂತೆ ಅವನಿಗೆ ಗೌರವದಲ್ಲಿ ಕಾಣತೊಡಗಿತ್ತು.

ದಿನಕ್ಕೊಬ್ಬಳು ಚೆಲುವೆಯ ದರ್ಶನ ಮನಸ್ಸಿಗೂ, ದೇಹಕ್ಕೂ ಟಾನಿಕ್ ಇದ್ದಂತೆ ಎಂದು ಯಾವುದೋ